# ವೈವಿಧ್ಯದ ಪಾತ್ರಗಳಲ್ಲಿ ಶ್ರದ್ಧಾ

ಬಾಲಿವುಡ್‌ನಲ್ಲಿ ಅತಿ ಹೆಚ್ಚು ಚಿತ್ರಗಳಲ್ಲಿ ನಟಿಸುತ್ತಿರುವ ಖ್ಯಾತಿ ಸದ್ಯಕ್ಕೆ ಶ್ರದ್ಧಾ ಕಪೂರ್‌ಗೆ ಇದ್ದಂತಿದೆ. ಆಕೆ ಅಭಿನಯಿಸಿದ ಬಹುಕಾಲದ ನಿರೀಕ್ಷೆಯ, ಖ್ಯಾತ ಬ್ಯಾಡ್ಮಿಂಟನ್ ಆಟಗಾರ್ತಿ ಸೈನಾ ನೆಹ್ವಾಲ್ ಜೀವನಕಥೆಯ ಚಿತ್ರ ಇನ್ನೇನು ಎರಡು ವಾರಗಳಲ್ಲಿ ತೆರೆಗೆ ಬರಲಿದೆ. ಪಕ್ಕಾ ಬ್ಯಾಡ್ಮಿಂಟನ್ ಆಟಗಾರ್ತಿಯಾಗಲು ಶ್ರದ್ಧಾ ಈ ಚಿತ್ರದಲ್ಲಿ ಸಾಕಷ್ಟು ಬೆವರು ಸುರಿಸಿದ್ದಾರೆ. ಬೆಳ್ಳಂಬೆಳಿಗ್ಗೆ ಐದೂವರೆಗೇ ಮೈದಾನದಲ್ಲಿ ಆಟವಾಡಲು ಹಾಜರಾಗಿದ್ದಾಳೆ. ಈ ಸಿನಿಮಾದ ಬಗ್ಗೆ ಆಕೆ ತುಂಬಾ ನಿರೀಕ್ಷೆ ಇಟ್ಟುಕೊಂಡಿದ್ದಾಳೆ.

ಆಕೆಯ ಹೊಸ ಚಿತ್ರ 'ಚಿಚ್ಚೋರ್'ಗೆ, ಹಿಂದೆ ಆಕೆ ಕಲಿತ ಮುಂಬೈಯ ಸೋಫಿಯಾ ಕಾಲೇಜಲ್ಲೇ ಶೂಟಿಂಗ್ ನಡೆದಿತ್ತು. ಇತ್ತೀಚೆಗೆ ಮತ್ತೊಮ್ಮೆ ಆ ಕಾಲೇಜಿಗೆ ಹೋದ ಶ್ರದ್ಧಾ ಜಾಹೀರಾತು ಚಿತ್ರವೊಂದಕ್ಕೆ ಅಲ್ಲೇ ಶೂಟಿಂಗ್ ಎದುರಿಸಿದ್ದಾಳೆ. 'ಚಿಚ್ಚೋರ್' ಚಿತ್ರದಲ್ಲಿ ಆಕೆಯದ್ದು ಕಾಲೇಜು ಹುಡುಗಿಯ ಪಾತ್ರವಂತೆ. 'ಈ ಕಾಲೇಜಿನ ಜೊತೆಗೆ ನನಗೆ ಭಾವನಾತ್ಮಕ ಸಂಬಂಧ ಬೆಳೆದಿದೆ' ಎನ್ನುವುದು ಆಕೆಯ ಮಾತು.



ಈ ವರ್ಷ ಆಕೆ ನಟಿಸಿದ ನಾಲ್ಕು ಚಿತ್ರಗಳು ಬಿಡುಗಡೆಯಾಗಲಿವೆ. ಕೈಯಲ್ಲಿ ಇನ್ನೂ ಎರಡು ಚಿತ್ರಗಳಿವೆ. 'ಸಾಹೊ' ಚಿತ್ರದಲ್ಲಿ ಆ್ಯಕ್ಷನ್ ಪಾತ್ರ. 'ಚಿಚ್ಚೋರ್'ನಲ್ಲಿ ಕಾಲೇಜು ಹುಡುಗಿ ಮತ್ತು ಮಧ್ಯವಯಸ್ಸಿನ ಮಹಿಳೆಯ ಡಬಲ್ ರೋಲ್. 'ಸ್ಟ್ರೀಟ್ ಡ್ಯಾನ್ಸರ್'ನಲ್ಲಿ ಬಿಂದಾಸ್ ನೃತ್ಯಗಾತಿಯ ಪಾತ್ರ. ಟೈಗರ್ ಶ್ರಾಫ್ ಜೊತೆಗೆ ನಟಿಸಿದ 'ಬಾಗಿ–3' ಕೂಡಾ ಬಿಡುಗಡೆಗೆ ಸಿದ್ಧವಾಗುತ್ತಿದೆ. ಚಿತ್ರಜೀವನದಲ್ಲಿ ಸಿಗುತ್ತಿರುವ ವೈವಿಧ್ಯಮಯ ಪಾತ್ರಗಳಿಂದಾಗಿ ಶ್ರದ್ಧಾ ಫುಲ್‌ಖುಷ್ ಆಗಿದ್ದಾಳಂತೆ. ■



# ಸಿದ್ದಿಕಿಯ ಸಾಲು ಚಿತ್ರಗಳು

ಬಾಲಿವುಡ್‌ನಲ್ಲಿ ಎಲ್ಲ ಏರಿಳಿತ, ಅಬ್ಬರ, ಪ್ರಚಾರಗಳ ಮಧ್ಯೆಯೂ ನಿರಂತರವಾಗಿ ಸಿನಿಮಾಗಳಲ್ಲಿ ನಟಿಸುತ್ತಾ ತಣ್ಣಗೆ ಇರುವಾತ ಈ ನವಾಜುದ್ದೀನ್ ಸಿದ್ದಿಕಿ. ಸೂಪರ್‌ಸ್ಟಾರ್‌ಗಳ ಸಿನಿಮಾಗಳು ವರ್ಷಕ್ಕೊಂದು ಬಿಡುಗಡೆಯಾದರೂ ಬಾಕ್ಸಾಫೀಸ್‌ನಲ್ಲಿ ಲಾಭ ಗಳಿಸಲು ಒದ್ದಾಡುವುದಿದೆ. ಆದರೆ ಸಿದ್ದಿಕಿಯ ಸಿನಿಮಾಗಳು ಒಂದರ ಹಿಂದೆ ಒಂದರಂತೆ ಬಿಡುಗಡೆಯಾಗುತ್ತಿವೆ. ಮೇ ತಿಂಗಳ ಮೊದಲ ವಾರದಲ್ಲಿ ಸಿದ್ದಿಕಿ ಅಭಿನಯದ ಮೂರು ಸಿನಿಮಾಗಳು ಬಿಡುಗಡೆ ಕಾಣುತ್ತಿವೆ. ಅದರಲ್ಲೂ ಎರಡು ಸಿನಿಮಾಗಳು ಒಂದೇ ದಿನ! ತನ್ನ ಸಿನಿಮಾಕ್ಕೆ ತನ್ನ ಸಿನಿಮಾವೇ ಪೈಪೋಟಿ ಕೊಡುವುದನ್ನು ನೋಡಿ ಸಿದ್ದಿಕಿಗೆ ಏನೂ ಅನ್ನಿಸುತ್ತಿಲ್ಲವಂತೆ. 'ಚೆನ್ನಾಗಿರುವ ಸಿನಿಮಾ ಓಡುತ್ತದೆ. ಎರಡೂ ಓಡುವುದಿಲ್ಲ ಎಂದು ಹೇಗೆ ಹೇಳುತ್ತೀರಿ?' ಎನ್ನುವುದು ಸಿದ್ದಿಕಿ ಪ್ರಶ್ನೆ.

'ದಿ ಮ್ಯೂಸಿಕ್ ಟೀಚರ್', 'ಫೋಬಿಯಾ–2' ಮತ್ತು 'ರಾತ್ ಅಖೇಲಿ ಹೈ' ಸಿದ್ದಿಕಿ ಅಭಿನಯದ ಈ ಮೂರು ಚಿತ್ರಗಳು. ಅದರಲ್ಲೂ 'ರಾತ್ ಅಖೇಲಿ ಹೈ' ಚಿತ್ರದಲ್ಲಿ ರಾಧಿಕಾ ಆಪ್ಟೆ ನಾಯಕಿ. ಅಭಿನಯದಲ್ಲಿ ಇಬ್ಬರೂ ಈಗಾಗಲೆ ಜನಮೆಚ್ಚುಗೆ ಗಳಿಸಿರುವುದರಿಂದ ಈ ಚಿತ್ರ ಬಾಕ್ಸಾಫೀಸ್‌ನಲ್ಲೂ ಚೆನ್ನಾಗಿ ಗಳಿಕೆ ಕಾಣುವ ನಿರೀಕ್ಷೆ ಇದೆ. 'ಎಲ್ಲ ಚಿತ್ರಗಳೂ ಬಾಕ್ಸಾಫೀಸ್‌ನಲ್ಲಿ ಯಶಸ್ವಿ ಆಗುವುದಿಲ್ಲ. ಹಾಗೆಂದು ಸಾಲು ಸಾಲಾಗಿ ಚಿತ್ರಗಳು ಬರುವಾಗ ನಡುವೆ ಎರಡು ಸಿನಿಮಾಗಳು ದುಡ್ಡು ಮಾಡದಿದ್ದರೆ ನನ್ನ ವೃತ್ತಿಜೀವನಕ್ಕೇನೂ ತೊಂದರೆ ಆಗುವುದಿಲ್ಲ' ಎಂದಿದ್ದಾನೆ ಸಿದ್ದಿಕಿ. ಈತ ನಟಿಸಿದ 'ಫೋಟೊಗ್ರಾಫ್' ಚಿತ್ರ ಮೇ 7ರಿಂದ ಅಮೆರಿಕದಲ್ಲಿ ನಡೆಯಲಿರುವ ನ್ಯೂಯಾರ್ಕ್ ಇಂಡಿಯನ್ ಫಿಲ್ಮ್ ಫೆಸ್ಟಿವಲ್‌ಗೂ ಆಯ್ಕೆಯಾಗಿದೆ.

ಸಿದ್ದಿಕಿ ಅಭಿಮಾನಿಗಳ ಸಂಖ್ಯೆಯೂ ದೊಡ್ಡದಿದೆ. ಇತ್ತೀಚೆಗೆ ಕಾನ್ಪುರದಲ್ಲಿ ಅಭಿಮಾನಿಯೊಬ್ಬ ಹಿಡಿದಾಡಿ ತಳ್ಳಿದ್ದರಿಂದ ಬಿದ್ದು ಕೈ ಫ್ರ್ಯಾಕ್ಚರ್ ಮಾಡಿಕೊಂಡ ಸಿದ್ದಿಕಿ, ಆ ಅಭಿಮಾನಿಯ ಮೇಲೆ ಸಿಟ್ಟಾಗಲೇ ಇಲ್ಲವಂತೆ. 'ಕೆಲವೊಮ್ಮೆ ಅಭಿಮಾನ ಹೆಚ್ಚಾದಾಗ ಸಹಿಸಿಕೊಳ್ಳಬೇಕಾಗುತ್ತದೆ' ಎಂದು ನಕ್ಕನಂತೆ.

■ ಹನಿ